**<u>ದಿವಾಣಿ ನ್ಯಾಯಾಲಯ ಮತ್ತು ಜೆ. ಎಮ್. ಎಫ್. ಸಿ. ನ್ಯಾಯಾಲಯ, ಜೇವರ್ಗಿ</u>**

**<u>ಸಿಸಿ ನಂ.39 /2019</u>**

**<u>ಚಾಸಾ-1/ಪಿಡಬ್ಲೂ-1</u>**

| | |
|---|---|
| **ಹೆಸರು** | ಪ್ರಕಾಶ |
| **ತಂದೆ ಹೆಸರು** | ಗುಂಡಾಚಾರ್ಯ |
| **ವಯಸ್ಸು** | **66** -ವರ್ಷ |
| **ಉದ್ಯೋಗ** | ನಿವೃತ್ತ ಉಪ-ತಹಸೀಲ್ದಾರ |
| **ವಾಸ ಸ್ಥಳ** | ಕಲ್ಬುರ್ಗಿ |

**<u>ದಿನಾಂಕ 21-02-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>**

**2008** ರಿಂದ ಮೇ-**2015** ರವರೆಗೆ ನೆಲೋಗಿಯಲ್ಲಿ ಕಂದಾಯ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

**8** ವರ್ಷಗಳ ಹಿಂದೆ ನಾಗರಾಣಿ ಬ್ರಿಡ್ಜ್ ಹತ್ತಿರ ಮರಳು ಸಾಗಿಸುತ್ತಿದ್ದಾಗ ನಾನು, ಚಾಸಾ-**4** ಮತ್ತು **5** ರವರು, ಪೊಲೀಸರು ಹಾಗೂ ಪಂಚರು ಅಲ್ಲಿಗೆ ಹೋಗಿ ನೋಡಿ ಆ ಬಗ್ಗೆ ಪೊಲೀಸರಿಗೆ ವರದಿ ನೀಡಿರುತ್ತೇನೆ. ಅಲ್ಲಿ **7** ರಿಂದ **8** ಲಾರಿಗಳಿದ್ದವು. ನಾವು ಅಲ್ಲಿಗೆ ಹೋದಾಗ ಚಾಲಕರು ಓಡಿಹೋದರು. ಈಗ ನಾನು ವರದಿಯನ್ನು ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿಯು ಸದರಿ ವರದಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-**1** ಎಂದು, ಸಾಕ್ಷಿಯ ಸಹಿಯನ್ನು ನಿಪಿ-**1**(ಎ) ಎಂದು ಗುರುತಿಸಲಾಯಿತು.

ವಶಪಡಿಸಿಕೊಂಡ ಟಿಪ್ಪರುಗಳನ್ನು ನೋಡಿದರೆ ಗುರುತಿಸಲಾಗುವುದಿಲ್ಲ. ನಾನು ಯಾವುದೇ ಪುರವಣಿ ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಸ.ಸ.ಅ.ರವರು ಅನುಮತಿಯನ್ನು ಕೋರಿರುತ್ತಾರೆ. ಅನುಮತಿ ನೀಡಲಾಯಿತು.)**

<u>ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

ನಾವು ಸ್ಥಳಕ್ಕೆ ಹೋದಾಗ **8** ಟಿಪ್ಪರುಗಳಲ್ಲಿ ಪರವಾನಿಗೆ ಇಲ್ಲದೇ ಮರಳು ಸಾಗಾಣಿಕೆ ಮಾಡಲಾಗುತ್ತಿತ್ತು ಎಂದರೆ ನಿಜ. ಸದರಿ ಟಿಪ್ಪರುಗಳನ್ನು ನಾವು ಪಂಚನಾಮೆಯ ಮುಖಾಂತರ ವಶಪಡಿಸಿಕೊಂಡೆವು ಎಂದರೆ ನಿಜ. ಈಗ ನೋಡುತ್ತಿರುವ ಪಂಚನಾಮೆಯಲ್ಲಿ ನನ್ನ ಸಹಿ ಇದೆ

ಎಂದರೆ ನಿಜ. ಸಾಕ್ಷಿಯು ಸದರಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದರಿಂದ ಪಂಚನಾಮೆಯನ್ನು ನಿಪಿ2 ಎಂದು, ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ದಿನಾಂಕ **28-04-2018** ರಂದು ಪೊಲೀಸರು ನಮ್ಮನ್ನು ಕರೆಯಿಸಿ **6** ಜನ ಆರೋಪಿತರನ್ನು ತೋರಿಸಿದರು ಎಂದರೆ ಸರಿಯಲ್ಲ. ಆ ಬಗ್ಗೆ ನಾನು ಈಗ ಓದಿ ಹೇಳಿದಂತೆ ಪೊಲೀಸರ ಮುಂದೆ ಪುರವಣಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಪುರವಣಿ ಹೇಳಿಕೆಯನ್ನು ನಿಪಿ-**3** ಎಂದು ಗುರುತಿಸಲಾಯಿತು.

ದಿನಾಂಕ **29-04-2018** ರಂದು ಪೊಲೀಸರು ನಮ್ಮನ್ನು ಕರೆಯಿಸಿ **2** ಜನ ಆರೋಪಿತರನ್ನು ತೋರಿಸಿದರು ಎಂದರೆ ಸರಿಯಲ್ಲ. ಆ ಬಗ್ಗೆ ನಾನು ಈಗ ಓದಿ ಹೇಳಿದಂತೆ ಪೊಲೀಸರ ಮುಂದೆ ಪುರವಣಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಪುರವಣಿ ಹೇಳಿಕೆಯನ್ನು ನಿಪಿ-**4** ಎಂದು ಗುರುತಿಸಲಾಯಿತು.

ಈ ಪೋಟೋಗಳಲ್ಲಿ ನೋಡುತ್ತಿರುವ ಟಿಪ್ಪರುಗಳನ್ನು ಆ ದಿನ ನಾವು ವಶಪಡಿಸಿಕೊಂಡ ಟಿಪ್ಪರುಗಳೆಂದರೆ ನನಗೆ ನೆನಪಿಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಆ ದಿನ ನಾವು ಸ್ಥಳಕ್ಕೆ ಹೋಗಿದ್ದೆವು, ಅಲ್ಲಿ ಟಿಪ್ಪರುಗಳಲ್ಲಿ ಅಕ್ರಮವಾಗಿ ಮರಳು ಸಾಗಾಣಿಕೆ ಮಾಡಲಾಗುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚರ ಸಮಕ್ಷಮ ಸದರಿ ಟಿಪ್ಪರುಗಳನ್ನು ಜಪ್ತಿಪಡಿಸಿಕೊಂಡೆವು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತು ಕೇಳಿ ಅಂಕಿ ಅಂಶಕ್ಕಾಗಿ ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು
ಜೇವರ್ಗಿ